# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,

## ಯಲಹಂಕ ವಲಯ

### ಸಹಾಯಕ ಕಾರ್ಯಪಾಲಕ ಅಭಿಯಂತರವರ ಕಛೇರಿ, ಯಲಹಂಕ ಉಪನಗರ ಉಪ ವಿಭಾಗ
### ವಾರ್ಡ್ ನಂ. 04ರ (ಯಲಹಂಕ ಉಪನಗರ) ವಾರ್ಡ್ ಕಮಿಟಿ ಸಭೆಯ ನಡವಳಿಗಳು.

ದಿನಾಂಕ: 22-01-2021 ರಂದು ಬೆಳಗ್ಗೆ 10.30 ಗಂಟೆಗೆ ವಾರ್ಡ್ ನಂ-04 ಯಲಹಂಕ ಉಪನಗರ ವಾರ್ಡ್ ಸಮಿತಿಯ ಮಾನ್ಯ ನೋಡೆಲ್ ಅಧಿಕಾರಿಗಳು ಹಾಗೂ ಕಾರ್ಯದರ್ಶಿಗಳು ಜೊತೆ ಯಲಹಂಕ ಉಪನಗರ ಉಪ ವಿಭಾಗದ ಕಛೇರಿಯಲ್ಲಿ ನೆಡೆದ ವಾರ್ಡ್ ಕಮಟಿ ಸಭೆಯ ನಡವಳಿಗಳು.

| ಕ್ರ.ಸಂ | ಸಭೆಯಲ್ಲಿ ಭಾಗವಹಿಸಿದ ಅಧಿಕಾರಿ ಹೆಸರು | ಪದನಾಮ |
|---|---|---|
| 01 | ಶ್ರೀ.ಮನೋಜ್ ಜೈನ್, ಐ.ಎ.ಎಸ್ | ಮಾನ್ಯ ವಿಶೇಷ ಆಯುಕ್ತರು (ಯೋಜನೆ) ಬಿ.ಬಿ.ಎಂ.ಪಿ ನೋಡಲ್ ಅಧಿಕಾರಿಗಳು (ವಾರ್ಡ್ ನಂ-04) |
| 02 | ಡಾಕ್ಟರ್ ಯೋಗನಂದ | ಆರೋಗ್ಯ ವೈದ್ಯಾಧಿಕಾರಿಗಳು |
| 03 | ಶ್ರೀ.ರಾಜೇಂದ್ರ ನಾಯಕ್ | ಕಾ.ಅ ಬಿ.ಬಿ.ಎಂ.ಪಿ (ವಿದ್ಯುತ್) |
| 04 | ಶ್ರೀ.ಹೆಚ್.ಪಿ.ಸಚಿನ್ | ಸ.ಕಾ.ಅ, ಬಿ.ಬಿ.ಎಂ.ಪಿ (ಯ.ಉ.ಉ.ವಿ) |
| 05 | ಶ್ರೀಮತಿ. ಕೃತಿಕಾ | ಸಹಾಯಕ ಕಂದಾಯ ಅಧಿಕಾರಿಗಳು (ಯ.ಉ.ಉ.ವಿ) |
| 06 | ಶ್ರೀ.ಹೆಚ್.ಕೆ.ದೇವರಾಜ್ | ಸ.ಕಾ.ಅ (ರೋಡ್ ಇನ್‌ಪ್ರಸ್ಟಚರ್ಸ್ ಬಿ.ಬಿ.ಎಂ.ಪಿ) |
| 07 | ಶ್ರೀ.ಶ್ರೀನಿವಾಸ ಜೆ.ಎನ್ | ಸ.ಅ ಬಿ.ಬಿ.ಎಂ.ಪಿ (ರಾಜಕಾಲುವೆ) |
| 08 | ಶ್ರೀ.ಪ್ರಭುದ್ದ ಕಾಂಬ್ಲೆ | ಸ.ಕಾ.ಅ ಬಿ.ಬಿ.ಎಂ.ಪಿ (ಎಸ್.ಡಬ್ಲ್ಯೂ.ಎಂ) |
| 09 | ಶ್ರೀಮತಿ. ಅನುಸೂಯ ಡಿ | ಸ.ಕಾ.ಅ (ಬಿ.ಡಬ್ಲ್ಯೂ.ಎಸ್.ಎಸ್.ಬಿ) ಒಳಚರಂಡಿ ವಿಭಾಗ (ಗೈರು ಹಾಜರು) |
| 10 | ಶ್ರೀ.ಪಿ.ಎಂ.ಮಲ್ಯಾದ್ರಿ | ತೋಟಗಾರಿಕೆ ಪರಿವೀಕ್ಷಕರು (ತೋಟಗಾರಿಕೆ) |
| 11 | ಶ್ರೀ.ರಾಮಸಂಜೀವಯ್ಯ | ಸ.ಅ ವಾರ್ಡ್ ನಂ-04 ಹಾಗೂ ಕಾರ್ಯದರ್ಶಿಗಳು. |
| 12 | ಶ್ರೀ.ವಿನಾಯಕ ಕೆ.ಎಂ | ಸ.ಅ (ಬಿ.ಡಬ್ಲ್ಯೂ.ಎಸ್.ಎಸ್.ಬಿ) |
| 13 | ಶ್ರೀ.ಕೆ.ಎಂ.ಸತೀಶ್ ಬಾಬು | ಸ.ಅ (ಬೇಸ್ಕಾಂ) |
| 14 | ನಾಗರಾಜ್ ಸಿ | ಠಾಣಾಧಿಕಾರಿಗಳು ಯಲಹಂಕ ಉಪನಗರ ಪೋಲಿಸ್ ಠಾಣೆ |
| 15 | ಶ್ರೀ.ಲಿಂಗರಾಜು | ಹಿರಿಯ ಆರೋಗ್ಯ ಪರಿವೀಕ್ಷಕರು, ಬಿ.ಬಿ.ಎಂ.ಪಿ ವಾರ್ಡ್ -4 |
| 16 | ಶ್ರೀಮತಿ. ಎನ್.ನೇತ್ರಾವತಿ | ಕಿರಿಯ ಆರೋಗ್ಯ ಪರಿವೀಕ್ಷಕರು ಬಿ.ಬಿ.ಎಂ.ಪಿ |
| 17 | ಶ್ರೀ.ಶೇಖರ್ | ಅರಣ್ಯ ಬಿ.ಬಿ.ಎಂ.ಪಿ ಯಲಹಂಕ ವಲಯ |

| | | |
|---|---|---|
| 18 | ಶ್ರೀ.ಲಕ್ಷ್ಮಿನಾರಾಯಣಪ್ಪ | ಜಾನುವಾರು ಅಧಿಕಾರಿ ಬಿ.ಬಿ.ಎಂ.ಪಿ ಯಲಹಂಕ ವಲಯ |
| 19 | ಶ್ರೀ.ಪ್ರಮೋದ್ | ಗುತ್ತಿಗೆದಾರರು (ವಿದ್ಯುತ್) |
| 20 | ಶ್ರೀಮತಿ. ಪಾವನಾ ನಾಗತಿ | ಸ.ಅ (ಯೋಜನೆ) ಬಿ.ಬಿ.ಎಂ.ಪಿ |
| 21 | ಅಸ್ರಬಾನು ಸಿ.ಎಸ್ | ಸ.ಅ (ಬಿ.ಡಬ್ಲ್ಯೂ.ಎಸ್.ಎಸ್.ಬಿ ಒಳಚರಂಡಿ ಮಂಡಳಿ) |
| | **ಬಡಾವಣೆ ಕ್ಷೇಮಾಭಿವೃದಿ ಸಂಘದ ಅಧ್ಯಕ್ಷರು/ಕಾರ್ಯದರ್ಶಿ/ಸದಸ್ಯರು/** | |
| 01 | ಶ್ರೀ.ಎಂ.ಸತೀಶ್ | ಮಾಜಿ ಸದಸ್ಯರು (ಬಿ.ಬಿ.ಎಂ.ಪಿ) |
| 02 | ಶ್ರೀ.ಸಂಗಪ್ಪ | ಆರ್,ಡಬ್ಲ್ಯೂ.ಎ ಎ ಸೆಕ್ಟರ್ |
| 03 | ಶ್ರೀ.ಟಿ.ಕೆ.ಪುಟ್ಟಸ್ವಾಮಿ | ಆರ್,ಡಬ್ಲ್ಯೂ.ಎ ಬಿ. ಸೆಕ್ಟರ್ |
| 04 | ಶ್ರೀ.ವಿಜಯ್ ಕುಮಾರ್ | ಆರ್,ಡಬ್ಲ್ಯೂ.ಎ ಬಿ. ಸೆಕ್ಟರ್ |
| 05 | ಶ್ರೀ.ಬೋರೆಗೌಡ | ಆರ್,ಡಬ್ಲ್ಯೂ.ಎ ಶಾರದ ನಗರ |
| 06 | ಶ್ರೀ.ರಕ್ಷಿತ್ | ಐ.ಟಿ.ಸಿ (ಒಣ ಕಸ ಕೇಂದ್ರ) |
| 07 | ಶ್ರೀ.ಕೆ.ಟಿ.ಗಂಗಾಧರ್ ಶೆಟ್ಟಿ | ಆರ್.ಡಬ್ಲ್ಯೂ.ಎ |
| 08 | ಆರ್.ಡಿ.ಪುಟ್ಟಸ್ವಾಮಿ | ಆರ್.ಡಬ್ಲ್ಯೂ.ಎ |
| 09 | ಅನಿಲ್ | ಐ.ಟಿ.ಸಿ |
| 10 | ಎಂ.ಎಸ್.ಸೂರ್ಯ ನಾರಾಯಣ | ಆರ್.ಡಬ್ಲ್ಯೂ.ಎ |

ಶ್ರೀ. ಸಚಿನ್ ಹೆಚ್.ಪಿ. ಸಹಾಯಕ ಕಾರ್ಯಪಾಲಕ ಅಭಿಯಂತರರು ಯಲಹಂಕ ಉಪನಗರ ಉಪ ವಿಭಾಗರವರು ಸಭೆಗೆ ಹಾಜರಿದ್ದ ನೋಡೆಲ್ ಅಧಿಕಾರಿಗಳು ಹಾಗೂ ಬಾಗವಹಿಸಿದ್ದ ಎಲ್ಲಾ ಅಧಿಕಾರಿಗಳನ್ನು ಸಭೆಗೆ ಸ್ವಾಗತಿಸುತ್ತಾ ಸಭೆ ಪ್ರಾರಂಭಿಸಲು ನೋಡೆಲ್ ಅಧಿಕಾರಿರವರನ್ನು ಕೋರಲಾಯಿತು

ಶ್ರೀ. ಮನೋಜ್ ಜೈನ್ ಐ.ಎ.ಎಸ್, ಮಾನ್ಯ ವಿಶೇಷ ಆಯುಕ್ತರು ಬಿ.ಬಿ.ಎಂ.ಪಿ (ಯೋಜನೆ) ಹಾಗೂ ಸಮಿತಿಯ ನೋಡೆಲ್ ಅಧಿಕಾರಿಯವರು ಸಭೆಯನ್ನು ಪ್ರಾರಂಭಿಸಿ ಈ ಹಿಂದಿನ ಸಭೆಯಲ್ಲಿ ಅಂದರೆ ದಿನಾಂಕ: 02-01-2021 ರಂದು ನಡೆದ ಸಭೆಯಲ್ಲಿ ಕೈಗೊಂಡ ಕ್ರಮಗಳ ಬಗ್ಗೆ ವಿವರಣೆ ಕೇಳಿದರು. ಹಾಗೂ ವಾರ್ಡ್ ನಂ-04ರ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಅಧಿಕಾರಿಗಳಿಗೆ ಕೈಗೊಂಡ ಕ್ರಮದ ಬಗ್ಗೆ ವರದಿ ನೀಡುವಂತೆ ಸಭೆಯಲ್ಲಿ ಸೂಚಿಸಿದರು.

| ಕ್ರ.ಸಂ | ವಿಷಯ ಸೂಚಿ | ನಿರ್ಣಯ | ಕ್ರಮ ತೆಗೆದುಕೊಳ್ಳಬೇಕಾದ ಅಧಿಕಾರಿ |
|---|---|---|---|
| 01 | 16ನೇ ಬಿ ಅಡ್ಡರಸ್ತೆಯಲ್ಲಿ ಒಳಚರಂಡಿಯ ಕೊಳವೆ ಸಾಲುಗಳನ್ನು ಅಳವಡಿಸಲು ರಸ್ತೆ ಕತ್ತರಿಸಿದ್ದು ಇದರಿಂದ ಸಾರ್ವಜನಿಕರ ಒಡಾಟಕ್ಕೆ ಹಾಗೂ ವಾಹನ ಸಂಚಾರಕ್ಕೆ ತುಂಬಾ ತೊಂದರೆ ಉಂಟಾಗುತ್ತಿರುವುದಾಗಿ ಆರ್.ಡಬ್ಲ್ಯೂ.ಎ ರವರು ಅಕ್ಷೇಪಣೆ ವ್ಯಕ್ತಪಡಿಸಿದರು. | ಸದರಿ ವಿಷಯಕ್ಕೆ ಸಂಬಂದಿಸಿದಂತೆ ನೋಡೆಲ್ ಅಧಿಕಾರಿಗಳು ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆಯ ಸಹಾಯಕ ಕಾರ್ಯಪಾಲಕ ಅಭಿಯಂತರರು ಒಳಚರಂಡಿ ವಿಭಾಗರವರಿಗೆ ಅಗೆದಿರುವ ರಸ್ತೆಯನ್ನು ಪುನರ್ ನಿರ್ಮಾಣ ಮಾಡಿ ಡಾಂಬರಿಕರಣ ಮಾಡಲು ಸೂಚಿಸಿದರು. | ಸಹಾಯಕ ಕಾರ್ಯಪಾಲಕ ಅಬಿಯಂತರರು ಒಳಚರಂಡಿ ವಿಭಾಗ (ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆ) |

| | | | |
|---|---|---|---|
| 02 | 13ನೇ ಎ ಮುಖ್ಯರಸ್ತೆಯಲ್ಲಿ ದಿನನಿತ್ಯ ರಸ್ತೆ ಸ್ವಚ್ಚತೆ ಸಮರ್ಪಕವಾಗಿ ನಡೆಯುತ್ತಿಲ್ಲವೆಂದು ಆರ್.ಡಬ್ಲ್ಯೂ.ಎ ರವರು ಅಕ್ಷೇಪಣೆ ವ್ಯಕ್ತಪಡಿಸಿದರು. | ಸದರಿ ವಿಷಯಕ್ಕೆ ಸಂಬಂದಿಸಿದಂತೆ ಮಾನ್ಯ ನೋಡಲ್ ಅಧಿಕಾರಿಗಳು ಕ್ರಮ ಕೈಗೊಳ್ಳುವಂತೆ ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ (ಎಸ್.ಡಬ್ಲ್ಯೂ.ಎಂ) ರವರಿಗೆ ಸೂಚಿಸಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು (ಎಸ್.ಡಬ್ಲ್ಯೂ.ಎಂ ವಿಭಾಗ) ಹಾಗೂ ಕಿರಿಯ ಆರೋಗ್ಯ ಪರಿವೀಕ್ಷಕರು (ವಾರ್ಡ್ ನಂ–04) |
| 03 | ಕೆಂಪೇಗೌಡ ಪಾರ್ಕ ಮತ್ತು ಬಸವಲಿಂಗಪ್ಪ ಪಾರ್ಕನಲ್ಲಿ ಆಳವಡಿಸಿರುವ ಗ್ರೀಲ್ ಪೇನ್ಸಿಂಗ್‌ಗೆ ಬಣ್ಣ ಬಳೆಯುವುದು ಮತ್ತು ಗೇಟ್‌ಅನ್ನು ಅಳವಡಿಸಿಕೊಡುವಂತೆ ಶ್ರೀ.ಸಂಗಪ್ಪ ಆರ್.ಡಬ್ಲ್ಯೂ.ಎ ರವರು ಕೋರಿದರು. | ಸದರಿ ವಿಷಯಕ್ಕೆ ಸಂಬಂದಿಸಿದಂತೆ ಮಾನ್ಯ ನೋಡಲ್ ಅಧಿಕಾರಿಗಳು ಕ್ರಮ ಕೈಗೊಳ್ಳುವಂತೆ ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ (ಯಲಹಂಕ ಉಪನಗರ ಉಪ ವಿಬಾಗ) ಸೂಚಿಸಿದರು. | ಸಹಾಯಕ ಅಭಿಯಂತರರು ವಾರ್ಡ್ ನಂ–04 |
| 04 | ವಾರ್ಡ್ ನಂ –04ರ ವ್ಯಾಪ್ತಿಯ ಪ್ರದೇಶಗಳ ರಸ್ತೆಗಳಲ್ಲಿ ಮ್ಯಾನ್‌ಹೋಲ್‌ಗಳು ಕುಸಿದಿದ್ದು, ಅವುಗಳನ್ನು ದುರಸ್ಥಿಪಡಿಸಿಕೊಡಲು ಸ್ಥಳೀಯರು ಕೋರಿದರು. | ಸದರಿ ವಿಷಯಕ್ಕೆ ಸಂಬಂದಿಸಿದಂತೆ ಮಾನ್ಯ ನೋಡಲ್ ಅಧಿಕಾರಿಗಳು ಕ್ರಮ ಕೈಗೊಳ್ಳುವಂತೆ ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ (ಬಿ.ಡಬ್ಲ್ಯೂ.ಎಸ್.ಎಸ್.ಬಿ) ರವರಿಗೆ ಸೂಚಿಸಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು & ಸಹಾಯಕ ಅಭಿಯಂತರರು (ಬಿ.ಡಬ್ಲ್ಯೂ.ಎಸ್.ಎಸ್.ಬಿ ವಿಭಾಗ) |

- ನೋಡಲ್ ಅಧಿಕಾರಿಗಳು ಪಾದಚಾರಿ ಮಾರ್ಗದಲ್ಲಿರುವಂತಹ ಬ್ಲಾಕ್‌ಸ್ಪಾಟ್‌ಗಳನ್ನು ತೆರವುಗೊಳಿಸುವಂತೆ ಹಾಗೂ ವಾರ್ಡ್ ನಂ–04ರಲ್ಲಿನ ಸುಮಾರು 91 ಕಿ.ಮೀ ರಸ್ತೆಯ ಎರಡು ಬದಿಗಳಲ್ಲಿ ಪ್ರತಿದಿನ ಬೆಳಗ್ಗೆ 11.00 ಗಂಟೆ ನಂತರ ಪೌರ ಕಾರ್ಮಿಕರಿಂದ ಮತ್ತು ಆಟೋ ಟಿಪ್ಪರ್‌ಗಳನ್ನು ಉಪಯೋಗಿಸಿಕೊಂಡು ಸ್ವಚ್ಚತೆ ಕಾರ್ಯ ನಡೆಸಲು ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ (ಎಸ್.ಡಬ್ಲ್ಯೂ.ಎಂ) ರವರಿಗೆ ಸೂಚಿಸಿದರು.

- ನೋಡಲ್ ಅಧಿಕಾರಿಗಳು ಯಲಹಂಕ ಉಪನಗರ ವಾರ್ಡ್ ನಂ –04ರ 3ನೇ ಎ ಅಡ್ಡರಸ್ತೆಯಲ್ಲಿ ವೈಟ್ ಟ್ಯಾಪಿಂಗ್ ಕಾಮಗಾರಿಯನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸುವಂತೆ ಹಾಗೂ ಪಾದಚಾರಿ ಮಾರ್ಗಗಳಲ್ಲಿ ತೆಗೆದಿರುವ ಹಳೆಯ ಕಾಬುಲ್ ಸ್ಟೋನ್ಸ್‌ಗಳನ್ನು ವಾರ್ಡ್ ಇಂಜಿನಿಯರ್ ರವರಿಗೆ ಹಸ್ತಾಂತರಿಸಲು ಸಹಾಯಕ ಕಾರ್ಯಪಾಲಕ ಅಭಿಯಂತರರು ಯೋಜನೆ ವಿಭಾಗ ಯಲಹಂಕ ವಲಯ ರವರಿಗೆ ಸೂಚಿಸಿದರು.

➢ ಕೊವಿಡ್ -19ರ ವ್ಯಾಕ್ಸಿನೇಷನ್ ನೀಡುವುದರ ಬಗ್ಗೆ ಆರೋಗ್ಯ ವೈದ್ಯಾಧಿಕಾರಿಗಳು ಯಲಹಂಕ ವಲಯರವರು ನೊಡೆಲ್ ಅಧಿಕಾರಿಗಳಿಗೆ ವಿವರಣೆಯನ್ನು ನೀಡಿದರು.

ಈ ಮೇಲ್ಕಂಡ ಎಲ್ಲಾ ಅಂಶಗಳನ್ನು ಕೂಲಂಕುಷವಾಗಿ ಚರ್ಚಿಸಲಾಯಿತು, ಹಾಗೂ ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರಿಗೆ ಹಾಗೂ ಅಧಿಕಾರಿಗಳಿಗೆ ವಂದನೆಗಳನ್ನು ಸಲ್ಲಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

Ramasanjeevaiah

ಶ್ರೀ.ರಾಮಸಂಜೀವಯ್ಯ
ಸಹಾಯಕ ಅಭಿಯಂತರರು ಹಾಗೂ
ಕಾರ್ಯದರ್ಶಿಗಳು, ವಾರ್ಡ್ ನಂ-04

ಶ್ರೀ.ಮನೋಜ್‌ಜೈನ್, ಐ.ಎ.ಎಸ್.
ಮಾನ್ಯ ವಿಶೇಷ ಆಯುಕ್ತರು (ಯೋಜನೆ) ಹಾಗೂ
ನೋಡೆಲ್ ಅಧಿಕಾರಿಗಳು ವಾರ್ಡ್ ನಂ-04

ಪ್ರತಿಯನ್ನು:

1. ಮಾನ್ಯ ಜಂಟಿ ಆಯುಕ್ತರು ಯಲಹಂಕ ವಲಯರವರ ಆಪ್ತ ಶಾಖೆಗೆ ಕಳುಹಿಸಿದೆ.
2. ಮಾನ್ಯ ಮುಖ್ಯ ಅಭಿಯಂತರರು ಯಲಹಂಕ ವಲಯರವರ ಆಪ್ತ ಶಾಖೆಗೆ ಕಳುಹಿಸಿದೆ.
3. ಆರೋಗ್ಯ ವೈದ್ಯಾಧಿಕಾರಿಗಳು ಯಲಹಂಕ ವಲಯರವರಿಗೆ ಕಳುಹಿಸಿದೆ.
4. ಕಾರ್ಯಪಾಲಕ ಅಭಿಯಂತರರು, ಬಿ.ಬಿ.ಎಂ.ಪಿ (ವಿದ್ಯುತ್) ಯಲಹಂಕ ವಲಯ ಸೂಕ್ತ ಕ್ರಮಕ್ಕಾಗಿ.
5. ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯ ನಿರ್ವಹಣೆ ಯಲಹಂಕ ವಿಭಾಗರವರ ಸೂಕ್ತ ಕ್ರಮಕ್ಕಾಗಿ.
6. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೇಸ್ಕಾಂ/ ಬಿ.ಡಬ್ಲ್ಯೂ.ಎಸ್.ಎಸ್.ಬಿ ಯಲಹಂಕ ಉಪ ವಿಭಾಗರವರ ಸೂಕ್ತ ಕ್ರಮಕ್ಕಾಗಿ.
7. ಕಛೇರಿ ಕಡತಕ್ಕೆ.